ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 16 ಚಾಸಾ- 69**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ನರಸಿಂಹಮೂರ್ತಿ |
| ತಂದೆಯ ಹೆಸರುಃ | : | ನರಸಪ್ಪ |
| ವಯಸ್ಸುಃ | : | 46 ವರ್ಷ |
| ಉದ್ಯೋಗಃ | : | ತಹಶೀಲ್ದಾರ್ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06-11-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಡಿಸೆಂಬರ್ 2012ರಿಂದ ಸೆಪ್ಟೆಂಬರ್ 2015ರವರೆಗೆ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ ಹಾಸನದಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಆರೋಪಿತರು ತಮ್ಮ ಆದಾಯಕ್ಕಿಂತ ಹೆಚ್ಚಿನ ಆಸ್ತಿ ಗಳಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಚಾಸಾ-1ರವರು ಸೋರ್ಸ್ ವರದಿಯನ್ನು ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ನಿಪಿ-1ರಂತೆ ನೀಡಿದ್ದರು. ಅದರಂತೆ ಪೊಲೀಸ್ ಅಧೀಕ್ಷಕರು ನಿಯಮಾನುಸಾರ ಕೇಸು ದಾಖಲಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ನನಗೆ ಸೂಚಿಸಿದ್ದರು. ಅದನ್ನು ಈಗ ನೋಡುತ್ತಿದ್ದು ನಿಪಿ-81 ಎಂದು ಅದನ್ನು ಸ್ವೀಕರಿಸಿದ ಬಗ್ಗೆ ನನ್ನ ಸಹಿ ಇದ್ದು ಅದನ್ನು ನಿಪಿ-81(ಎ) ಎಂದು ಗುರುತಿಸಲಾಯಿತು. ಅದರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವ.ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಪ್ರ.ವ.ವ.ಯನ್ನು ಈಗ ನೋಡುತ್ತಿದ್ದು ನಿಪಿ-82 ಎಂದು ಸಾಕ್ಷಿಯ ರುಜುವನ್ನು ನಿಪಿ-82(ಎ) ಎಂದು ಗುರುತಿಸಲಾಯಿತು. ಆರೋಪಿತರು ವಾಸವಿದ್ದ ಮನೆ ಕಛೇರಿ ಮತ್ತು ಆರೋಪಿತರ ತಾಯಿ ವಾಸವಿದ್ದ ಮನೆಯನ್ನು ಶೋಧನೆ ಮಾಡಲು ಶೋಧನಾ ವಾರೆಂಟನ್ನು ನೀಡುವಂತೆ ನ್ಯಾಯಾಲಯಕ್ಕೆ ಮನವಿಯನ್ನು ದಿಃ25-

7-13ರಂದು ಸಲ್ಲಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-83 ಎಂದು ಗುರುತಿಸಲಾಯಿತು. ಅದರಂತೆ ನ್ಯಾಯಾಲಯವು 3 ಶೋಧನಾ ವಾರೆಂಟನ್ನು ನೀಡಿರುತ್ತದೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಎರಡು ವಾರೆಂಟ್ ಗಳು ಈಗಾಗಲೇ ನಿಪಿ-3 ಮತ್ತು 11 ಎಂದು ಗುರುತಿಸಲ್ಪಟ್ಟಿರುತ್ತದೆ. ಇನ್ನೊಂದು ಶೋಧನಾ ವಾರೆಂಟನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-84 ಎಂದು ಗುರುತಿಸಲಾಯಿತು. ಅದೇ ದಿನ ಹಾಸನ ತಾಲ್ಲೂಕು ಪಂಚಾಯಿತಿಯ ಇಓ ರವರಿಗೆ, ಹಾಸನ ವಲಯದ ಅಬಕಾರಿ ಉಪನಿರೀಕ್ಷಕರಿಗೆ ಮತ್ತು ತಾಲ್ಲೂಕು ಸಮಾಜಕಲ್ಯಾಣಾಧಿಕಾರಿಗಳು, ಹಾಸನ ಇವರಿಗೆ ಪಂಚರನ್ನು ಕಳುಹಿಸಿಕೊಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು ಕ್ರಮವಾಗಿ ನಿಪಿ-85 ರಿಂದ ನಿಪಿ-87 ಎಂದು ಗುರುತಿಸಲಾಯಿತು. ಅವುಗಳಲ್ಲಿ ನನ್ನ ರುಜುಗಳಿದ್ದು ಕ್ರಮವಾಗಿ ನಿಪಿ-85(ಎ) ಯಿಂದ ನಿಪಿ-87(ಎ) ಎಂದು ಗುರುತಿಸಲಾಯಿತು. ಅದರಂತೆ ಸದರಿಯವರು ತಾಲ್ಲೂಕು ಪಂಚಾಯಿತಿ ಇಓ ರವರ ಕಛೇರಿಯಿಂದ ಚಾಸಾ-2 ರವರನ್ನು ಅಬಕಾರಿ ಉಪನಿರೀಕ್ಷಕರ ಕಛೇರಿಯಿಂದ ಚಾಸಾ-3 ಮತ್ತು 4 ರವರನ್ನು ತಾಲ್ಲೂಕು ಸಮಾಜಕಲ್ಯಾಣಾಧಿಕಾರಿಗಳ ಕಛೇರಿಯಿಂದ ಚಾಸಾ-5ರವರನ್ನು ಕಳುಹಿಸಿಕೊಟ್ಟಿರುತ್ತಾರೆ. ಸದರಿಯವರು ಅದೇ ದಿನ ಸಂಜೆ 5-30 ಗಂಟೆಗೆ ನನ್ನ ಮುಂದೆ ಹಾಜರಾಗಿ ವರದಿ ಮಾಡಿರುತ್ತಾರೆ. ಅವರಿಗೆ ಪ್ರಕರಣದ ಮಾಹಿತಿಯನ್ನು ತಿಳಿಸಿ ಪ್ರಕರಣದ ಗೌಪ್ಯತೆಯನ್ನು ಕಾಪಾಡುವಂತೆ ಸೂಚಿಸಿ ಮಾರನೇ ದಿನ ಬೆಳಿಗ್ಗೆ 5 ಗಂಟೆಗೆ ಕಛೇರಿಗೆ ಬರುವಂತೆ ಸೂಚಿಸಿ ಕಳುಹಿಸಿಕೊಟ್ಟೆನು. ಅದೇ ದಿನ ಚಾಸಾ-1ರವರಿಗೆ ಆರೋಪಿತರ ತಾಯಿ ಮನೆ ಮತ್ತು ಕಛೇರಿಯನ್ನು ಶೋಧನೆ ಗೊಳಿಸಲು ನಿಪಿ-3 ಮತ್ತು 11ರ ಶೋಧನಾ ವಾರೆಂಟ್ ನೀಡಿರುತ್ತೇನೆ.

3.ಮಾರನೇ ದಿವಸ 26-7-13ರಂದು ಬೆಳಿಗ್ಗೆ 5 ಗಂಟೆಗೆ ಮೇಲೆ ಹೇಳಿದ ಪಂಚರು, ನಾನು, ಇತರ ಅಧಿಕಾರಿಗಳು ಸಿಬ್ಬಂದಿಗಳು ಕಛೇರಿಗೆ ಹಾಜರಾದೆವು. ಮತ್ತೊಮ್ಮೆ ಎಲ್ಲರಿಗೂ ಮಾಹಿತಿಯನ್ನು ನೀಡಿ ಆರೋಪಿತರ ಮನೆಯ ಶೋಧನೆ ನಡೆಸಲು ಇಲಾಖಾ ವಾಹನದಲ್ಲಿ ಪಂಚರಾದ ಸುನಿಲ್ ಮತ್ತು ಅನಿತಾ ಚಾಸಾ-2ಮತ್ತು 3ರವರೊಂದಿಗೆ ಆರೋಪಿತರ ಉದಯಗಿರಿ ಮನೆಗೆ ಹೋದೆನು. ಆಗ ಸಮಯ ಸುಮಾರು 5-40 ಗಂಟೆ ಆಗಿತ್ತು. ನಂತರ ಆರೋಪಿತರ ಮನೆಯ ಕಾಂಪೌಂಡ್ ಒಳಗೆ ಪ್ರವೇಶಿಸಿ ಕಾಲಿಂಗ್ ಬೆಲ್ ಮಾಡಿದಾಗ ಒಬ್ಬ ವ್ಯಕ್ತಿ ಹೊರಕ್ಕೆ ಬಂದರು. ಅವರ ಹೆಸರು ಕೇಳಿದಾಗ

ಹಾಸನ ನಗರಸಭೆಯ ಸಹಾಯಕ ಇಂಜಿನಿಯರ್ ಆನಂದ ಎಂದು ತಿಳಿಸಿದರು. ಅವರಿಗೆ ನಮ್ಮ ಪರಿಚಯ ಮಾಡಿಕೊಂಡು ಪ್ರಕರಣದ ವಿವರ ತಿಳಿಸಿ ಅವರ ಮನೆ ಶೋಧನೆ ಮಾಡಲು ತಂದಿರುವ ವಾರೆಂಟನ್ನು ತೋರಿಸಿದೆನು. ಅವರು ಅದನ್ನು ಓದಿ ತಿಳಿದುಕೊಂಡು ಅದಕ್ಕೆ ಸಹಿ ಹಾಕಿದರು. ನಂತರ ಪಂಚರು, ಸಿಬ್ಬಂದಿಗಳು ಮತ್ತು ನಮ್ಮ ಅಂಗಶೋಧನೆಯನ್ನು ಅವರ ಮುಂದೆ ನಾವು ಮಾಡಿಕೊಂಡೆವು. 6-30 ಗಂಟೆಗೆ ಪಂಚನಾಮೆ ಪ್ರಾರಂಭಿಸಿದೆನು.

4.ಕಾಂಪೌಂಡ್ ಒಳಗಿನ ಆವರಣದಲ್ಲಿ 2 ದ್ವಿಚಕ್ರವಾಹನಗಳು ಇದ್ದವು. ಒಂದು Honda Activa ನಂಬರ್ ಕೆಎ-13-ಆರ್-3866 ಮತ್ತು ಇನ್ನೊಂದು ಟಿವಿಎಸ್ ಸ್ಕೂಟರ್ ನಂಬರ್ ಕೆಎ-13-ಎಸ್-29 ಆಗಿತ್ತು. ಕಾಂಪೌಂಡ್ ಹೊರಗೆ ಒಂದು ಕಾರು ಕೆಎ-02-ಎಂಇ-4667 ಇತ್ತು. ಮೂರೂ ವಾಹನಗಳ ಮೀಟರ್ ರೀಡಿಂಗ್‌ನ್ನು ಮಹಜರಿನಲ್ಲಿ ಕಾಣಿಸಿರುತ್ತೇನೆ. ಅಲ್ಲೇ ಉತ್ತರ ದಿಕ್ಕಿನ ಗೋಡೆಯಲ್ಲಿ ವಿದ್ಯುತ್ ಸ್ಥಾವರ ಸಂಖ್ಯೆ ಎಲ್ 61202, ರಿಂದ 60209 ಹಾಗೂ ಎಇಹೆಚ್ 61206 ಇತ್ತು.

5.ನಂತರ ಮನೆಯ ವರಾಂಡಾದಲ್ಲಿ ಪಂಚನಾಮೆಯಲ್ಲಿ ನಮೂದಿಸಿದ 1ರಿಂದ 6ರ ವಸ್ತುಗಳು ಇದ್ದವು, ಅವುಗಳ ಅಂದಾಜು ಮೌಲ್ಯ 29,800ಆಗಿತ್ತು. ಮನೆಯ ಲಿವಿಂಗ್ ಹಾಲ್ ನಲ್ಲಿ ಕ್ರಮಸಂಖ್ಯೆ 1 ರಿಂದ 10ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 118500 ಆಗಿತ್ತು. ಮಲಗುವ ಮಾಸ್ಟರ್ ಬೆಡ್ ರೂಂನ ಅಳತೆ 20 ಇಂಟು 13 ಇದ್ದು ಅದರಲ್ಲಿ ಕ್ರಮಸಂಖ್ಯೆ 1 ರಿಂದ 31 ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 653321ಆಗಿತ್ತು. ಅದರಲ್ಲಿ ಕ್ರ.ಸಂ. 3 ರಲ್ಲಿ ಒಂದು ಪ್ಲಾಸ್ಟಿಕ್ ಕವರಿನಲ್ಲಿ 501700ನಗದು ಇತ್ತು. ಅದನ್ನು ಆ ಬಗ್ಗೆ ಆರೋಪಿತರು ಸಮರ್ಪಕವಾದ ಉತ್ತರ ನೀಡದಿದ್ದರಿಂದ ಮುಂದಿನ ಕ್ರಮದ ಬಗ್ಗೆ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅದೇ ರೂಮಿನ 2ನೇ compartment ನಲ್ಲಿ ಕ್ರಮಸಂಖ್ಯೆ 1 ರಿಂದ 37ರಲ್ಲಿ ಕಾಣಿಸಿದ ದಾಖಲೆಗಳು ಮತ್ತಿತರ ವಸ್ತುಗಳು ಕಂಡುಬಂದವು. ಆ ವಸ್ತುಗಳ ಅಂದಾಜು ಮೌಲ್ಯ 423693 ಆಗಿತ್ತು. ಅದೇ compartment ನಲ್ಲಿ ಕ್ರ.ಸಂ. 1 ರಿಂದ 6ರಲ್ಲಿ ಕಾಣಿಸಿದ ಬ್ಯಾಂಕ್ ಪಾಸ್ ಪುಸ್ತಕಗಳು ಇದ್ದವು. ಆ ಪುಸ್ತಕಗಳಲ್ಲಿ ಇದ್ದ ಬಾಕಿ ಮೊತ್ತ 1071331.53ರೂಪಾಯಿ ಆಗಿತ್ತು. ಅದೇ compartment ನಲ್ಲಿ ಕ್ರ.ಸಂ.1 ರಿಂದ 20ರಲ್ಲಿ ಕಾಣಿಸಿದ

ದಾಖಲೆಗಳು ಕಂಡುಬಂದವು. 3ನೇ compartment ನಲ್ಲಿ ಕ್ರಮ ಸಂಖ್ಯೆ 1 ರಿಂದ 16ರಲ್ಲಿ ಕಾಣಿಸಿದ ದಾಖಲೆಗಳು ಕಂಡುಬಂದವು. ವಾಲ್ಡ್ರೋಬ್ ನ 2ನೇ compartment ನಲ್ಲಿ ಲೆದರ್ ಬ್ಯಾಗ್ ಕ್ರ.ಸಂ.1 ರಿಂದ 38ರಲ್ಲಿ ಕಾಣಿಸಿದ ಬಂಗಾರದ ಒಡವೆಗಳಿದ್ದು ಅವುಗಳ ತೂಕ 456.940ಗ್ರಾಂ ಮತ್ತು ಅಂದಾಜು ಒಟ್ಟು ಮೌಲ್ಯ 11,43,523 ಆಗಿತ್ತು. ಆರೋಪಿತರ ಪತ್ನಿ ಶುಭಾರವರ ಮೈಮೇಲೆ ಕ್ರ.ಸಂ.1 ರಿಂದ 4 ರಲ್ಲಿ ಕಾಣಿಸಿದ ಒಡವೆಗಳಿತ್ತು. ಹಾಗೆಯೇ ಆರೋಪಿತರ ಮೈಮೇಲೆ ಕ್ರ.ಸಂ.5 ಮತ್ತು 6 ರಲ್ಲಿ ಕಾಣಿಸಿದ ಒಡವೆಗಳಿತ್ತು. ಆ ಒಡವೆಗಳನ್ನು ಸಿಬ್ಬಂದಿ ಮೂಲಕ ಅಕ್ಕಸಾಲಿಗರನ್ನು ಕರೆಸಿ ಅಲ್ಲೇ ತೂಕ ಮಾಡಿಸಿ ಅಂದಾಜು ಮೌಲ್ಯೀಕರಿಸಿರುತ್ತೇನೆ. ಅಲ್ಲಿ ದೊರೆತ ಆಭರಣಗಳು ಮತ್ತು ಆರೋಪಿತರ ಪತ್ನಿ ಹಾಗು ಅವರ ಮೈಮೇಲಿದ್ದ ಚಿನ್ನದ ಒಡವೆಗಳನ್ನು ಅವರಿಗೆ ಬಿಟ್ಟುಕೊಟ್ಟಿರುತ್ತೇನೆ ಹಾಗೂ ಸ್ವೀಕೃತಿ ನೀಡಿರುತ್ತೇನೆ. ಸದರಿ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು ನಿಪಿ-88 ಎಂದು ಗುರುತಿಸಲಾಯಿತು.

6.ಆರೋಪಿತರಿಗೆ ಸಂಬಂಧಪಟ್ಟ ದಾಖಲಾತಿಗಳು ಅವರ ಮಾವ ವಾಸವಿರುವ ಕುವೆಂಪುನಗರದ ಮನೆಯಲ್ಲಿ ಇರುವುದಾಗಿ ಬಾತ್ಮಿಬಂದ ಮೇರೆಗೆ ಸದರಿ ಮನೆಯನ್ನು ಶೋಧನೆ ಮಾಡುವಂತೆ ಚಾಸಾ-1ರವರಿಗೆ ಸಿಆರ್ ಪಿ ಸಿ 165ರಂತೆ ಆದೇಶವನ್ನು ಮಾಡಿರುತ್ತೇನೆ.

7.ನಂತರ ಆರೋಪಿತರ ಮಾಸ್ಟರ್ ಬೆಡ್ರೂಮ್ ಶೋಧಿಸಿದಾಗ ಕೀ ದೊರೆತಿದ್ದು ಆ ಬಗ್ಗೆ ವಿಚಾರಿಗಿಸಿದಾಗ ಅದು ಅವರ ಹೆಂಡತಿ ಶುಭಾರವರು ಕುವೆಂಪುನಗರದ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಹೊಂದಿರುವ ಲಾಕರ್ ಗೆ ಸಂಬಧಪಟ್ಟದ್ದೆಂದು ತಿಳಿಸಿದರು. ನಂತರ ಶೋಧನಾ ಪಂಚನಾಮೆ ಯನ್ನು ಅಲ್ಲಿಯೇ ಸ್ಥಗಿತಗೊಳಿಸಿ ಶುಭಾ, ಅಕ್ಕಸಾಲಿಗರು ಮತ್ತು ಪಂಚರೊಂದಿಗೆ ಸದರಿ ಬ್ಯಾಂಕಿಗೆ ಭೇಟಿಕೊಟ್ಟು ಅಲ್ಲಿ ಶೋಧನೆ ಜರುಗಿಸಿ ಮಹಜರನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-56ರಂತೆ ನಡೆಸಿದೆನು. ಅದರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-56(ಸಿ) ಎಂದು ಗುರುತಿಸಲಾಯಿತು. ಅದರಲ್ಲಿ ನಿಪಿ-56ರಲ್ಲಿ ಕಾಣಿಸಿದ 7 ಬಂಗಾರದ ಒಡವೆಗಳು ಇದ್ದವು, ಅವುಗಳ ಒಟ್ಟು ತೂಕ 125.300ಗ್ರಾಂ ಆಗಿತ್ತು ಮತ್ತು ಅವುಗಳ ಅಂದಾಜು ಬೆಲೆ 3,06,985 ಎಂದು ಅಕ್ಕಸಾಲಿಗರು ತಿಳಿಸಿದರು. ಆ ಒಡವೆಗಳನ್ನು ಯಥಾಸ್ಥಿತಿಯಲ್ಲಿ ಶುಭಾರವರಿಗೆ ನೀಡಿ ಸ್ವೀಕೃತಿ ಪಡೆದಿರುತ್ತೇನೆ. ಸದರಿ

ಸ್ವೀಕೃತಿಯನ್ನು ಈಗ ನೋಡುತ್ತಿದ್ದು ಆ ಸ್ವೀಕೃತಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-89 ಎಂದು ಗುರುತಿಸಲಾಯಿತು. ನಂತರ ವಾಪಸ್ ಆರೋಪಿತರ ಮನೆಗೆ ಬಂದು ಶೋಧನಾ ಕ್ರಮವನ್ನು ಮುಂದುವರೆಸಿದೆನು. ಮನೆಯ ಡೈನಿಂಗ್ ಹಾಲ್ ಪರಿಶೀಲಿಸಿದಾಗ ಕ್ರ.ಸಂ.1 ರಿಂದ 12ರಲ್ಲಿ ಕಾಣಿಸಿದ ವಸ್ತುಗಳು ಇದ್ದವು. ಅವುಗಳ ಅಂದಾಜು ಮೌಲ್ಯ 62940ರೂ ಆಗಿರುತ್ತದೆ. ಮನೆಯ ಕಾರ್ ಪಾರ್ಕಿಂಗ್ ಹಾಲ್ ನಲ್ಲಿ ಕ್ರ.ಸಂ. 1 ರಿಂದ 9ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 30250ರೂಪಾಯಿ ಆಗಿತ್ತು. ಬಾತ್ ರೂಂ ಮತ್ತು ಪ್ಯಾಸೇಜಿನಲ್ಲಿ ಪರಿಶೀಲಿಸಿದಾಗ ಕ್ರ.ಸಂ. 1 ರಿಂದ 6ರಲ್ಲಿ ಕಾಣಿಸಿದ ವಸ್ತುಗಳು ಕಂಡುಬಂದಿದ್ದು ಅವುಗಳ ಅಂದಾಜು ಮೌಲ್ಯ 39200ರೂಪಾಯಿ ಆಗಿತ್ತು. ಅಡುಗೆ ಮನೆಯನ್ನು ಶೋಧಸಿದಾಗ ಕ್ರ.ಸಂ. 1 ರಿಂದ 12 ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 78500ರೂಪಾಯಿ ಆಗಿತ್ತು. ದೇವರ ಮನೆಯನ್ನು ಪರಿಶೀಲಿಸಿದಾಗ ಕ್ರ.ಸಂ.1 ರಿಂದ 4ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 31000 ರೂಪಾಯಿ ಆಗಿತ್ತು. ಮಕ್ಕಳು ಮಲಗುವ ಕೋಣೆಯನ್ನು ಶೋಧಿಸಿದಾಗ ಕ್ರ.ಸಂ.1 ರಿಂದ 14ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 36599 ರೂಪಾಯಿ ಆಗಿತ್ತು. ಆ ಸಮಯದಲ್ಲಿ ಚಾಸಾ-1ರವರು ಆರೋಪಿತರ ಮಾವ ಜಯರಾಂ ರವರ ಮನೆ ಶೋಧಿಸಿ ಪಂಚನಾಮೆ ನಡೆಸಿಕೊಂಡು ಬಂದು ನನ್ನ ಮುಂದೆ ವರದಿ ಮಾಡಿದರು. ಆ ಪಂಚನಾಮೆ ನಿಪಿ-10 ಆಗಿರುತ್ತದೆ.

8.ಆರೋಪಿತರ ಕಛೇರಿಯನ್ನು ಶೋಧನೆ ಮಾಡಲು ಆರೋಪಿತರ ಅವಶ್ಯಕತೆ ಇದ್ದುದರಿಂದ ಚಾಸಾ-1ರವರ ಜೊತೆ ಆರೋಪಿಯನ್ನು ಕಳುಹಿಸಿದೆನು. ಅವರ ಅನುಪಸ್ಥಿತಿಯಲ್ಲಿ ಅವರ ಹೆಂಡತಿ ಸಮಕ್ಷಮ ಪಂಚನಾಮೆ ಮುಂದುವರೆಸಿದೆನು. 1ನೇ ಮಹಡಿಯ ಹಾಲನ್ನು ಶೋಧಿಸಿದಾಗ ಕ್ರ.ಸಂ. 1 ಮತ್ತು2 ರ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 35,000ರೂಪಾಯಿ ಆಗಿರುತ್ತದೆ. ಮನೆಯ ಮೊದಲನೆ ಮಹಡಿಯ ಉತ್ತರದ ಬೆಡ್ ರೂಂನ್ನು ಪರಿಶೀಲಿಸಿದಾಗ ಕ್ರ.ಸಂ.1 ರಿಂದ 15ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 75800 ರೂಪಾಯಿ ಆಗಿತ್ತು. ಹಾಗೆಯೇ ದಕ್ಷಿಣದ ಬೆಡ್ ರೂಂ ಪರಿಶೀಲಿಸಿದಾಗ ಕ್ರ.ಸಂ.1 ರಿಂದ 13ರಲ್ಲಿ ಕಾಣಿಸಿದ ವಸ್ತುಗಳಿದ್ದು ಅವುಗಳ ಅಂದಾಜು ಮೌಲ್ಯ 1642000 ರೂಪಾಯಿ ಆಗಿತ್ತು. ಆ ಸಮಯದಲ್ಲಿ ಚಾಸಾ-1ರವರು ಆರೋಪಿತರ ಕಛೇರಿಯಲ್ಲಿ

ಶೋಧನಾ ವಾರೆಂಟ್ ಜಾರಿಗೊಳಿಸಿ ಪಂಚನಾಮೆ ನಡೆಸಿಕೊಂಡು ಬಂದು ನನ್ನ ಮುಂದೆ ಹಾಜರಾದರು. ಶೋಧನಾ ವೇಳೆಯಲ್ಲಿ ಅರೋಪಿತರು ಮತ್ತು ಅವರ ಹೆಂಡತಿ ಹೊಂದಿರುವ ಪಾಸ್ ಪೋರ್ಟ್ ಪುಸ್ತಕಗಳು ದೊರಕಿದ್ದು ಅವುಗಳನ್ನು ಅವರ ವಶಕ್ಕೆ ಬಿಟ್ಟುಕೊಟ್ಟಿರುತ್ತೇನೆ. ಆರೋಪಿತರು 1ನೇ ಮಹಡಿಯಲ್ಲಿ 20 ಇಂಟು 30 ಅಳತೆಯ ಒಂದು ಮನೆ ನಿಶಮಿಸಿ ಅದನ್ನು ಧನಂಜಯ ಎಂಬುವವರಿಗೆ ಏಪ್ರಿಲ್ 2013ರವರೆಗೆ ಭೋಗ್ಯಕ್ಕೆ ನೀಡಿರುವುದು ಕಂಡುಬಂತು. ಆ ಭೋಗ್ಯದ ಕರಾರು ಪತ್ರದ ಪ್ರತಿಯನ್ನು ಸ್ವೀಕರಿಸಿರುತ್ತೇನೆ. ಮನೆಯ ತಾರಸಿಯಲ್ಲಿ 200 ಮತ್ತು 150 ಲೀಟರ್ ಸಾಮರ್ಥ್ಯದ ಸುಪ್ರಿಂ ಕಂಪೆನಿಯ 2 ಸೋಲಾರ್ ವಾಟರ್ ಹೀಟರ್ ಗಳು ಇದ್ದವು.

9.ಶೋಧನಾ ಸಮಯದಲ್ಲಿ ಮಾಸ್ಟರ್ ಬೆಡ್ ರೂಂನಲ್ಲಿ ದೊರೆತಂತಹ ದಾಖಲೆಗಳು, ಪಾಸ್ ಪುಸ್ತಕಗಳು ಮತ್ತು ವಿಮಾ ಪಾಲಿಸಿ ದಾಖಲಾತಿಗಳು ಮತ್ತಿತರ ದಾಖಲಾತಿಗಳಿಗೆ ನನ್ನ ಸಹಿಯನ್ನು ಹಾಕಿ ಪಂಚರ ಸಹಿ ಪಡೆದು ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಈ ಬಗ್ಗೆ ಪಂಚನಾಮೆಯನ್ನು ಈಗಾಗಲೇ ಗುರುತಿಸಲ್ಪಟ್ಟಿರುವ ನಿಪಿ-15 ರಂತೆ ನಡೆಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-15(ಡಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಬೆಳಿಗ್ಗೆ 6-30 ರಿಂದ ಸಂಜೆ 6-30ರವರೆಗೆ ನಡೆಸಿರುತ್ತೇನೆ. ಸಿಆರ್ ಪಿ ಸಿ ಕಲಂ 165ರನ್ವಯ ನಾನು ಹೊರಡಿಸಿರುವ ಆದೇಶವನ್ನು ನೋಡುತ್ತಿದ್ದು ಅದನ್ನು ನಿಪಿ-90 ಎಂದು ಸಾಕ್ಷಿಯ ಸಹಿವುಯನ್ನು ನಿಪಿ-90(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಆರೋಪಿತರಿಗೆ ನೀಡಿ ಅವರ ಸಹಿ ಪಡೆದಿರುತ್ತೇನೆ. ಅವರ ಸಹಿಯನ್ನು ಈಗ ನೋಡುತ್ತಿದ್ದು ನಿಪಿ-15(ಇ) ಎಂದು ಗುರುತಿಸಲಾಯಿತು. ಚಾಸಾ-1ರವರು ಆರೋಪಿತರ ತಾಯಿ ಮನೆ ಶೋಧನೆ ನಡೆಸಿದ ಪಂಚನಾಮೆಯನ್ನು ಶೋಧನಾ ವಾರೆಂಟ್ ನೊಂದಿಗೆ ನನ್ನ ಮುಂದೆ ಹಾಜರುಪಡಿಸಿದರು.

9.ಆರೋಪಿತರ ತಾಯಿ ಮನೆಯಲ್ಲಿ ಶೋಧಿಸಿ ನಡೆಸಿದ ಪಂಚನಾಮೆ ಈಗ ನೋಡುತ್ತಿದ್ದು ಅದು ನಿಪಿ-4 ಆಗಿರುತ್ತದೆ. ಹಾಗೆಯೇ ಆರೋಪಿತರ ಕಛೇರಿಯನ್ನು ಶೋಧನೆ ಮಾಡಿ ನಡೆಸಿದ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದು ನಿಪಿ-12 ಆಗಿರುತ್ತದೆ. ನಂತರ ವಶಪಡಿಸಿಕೊಂಡ ಎಲ್ಲಾ

ದಾಖಲೆಗಳನ್ನು ಮಾಲುಪಟ್ಟಿಯಲ್ಲಿ ಸೇರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಶೋಧನಾ ವಾರೆಂಟ್ ಮತ್ತು ಅವುಗಳಿಗೆ ಸಂಬಂಧಪಟ್ಟ ಪಂಚನಾಮೆಗಳನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ವಶಪಡಿಸಿಕೊಂಡ 501700ರೂಪಾಯನ್ನು ನ್ಯಾಯಾಲಯದ ಅನುಮತಿ ಪಡೆದು ಜಿಲ್ಲಾ ಖಜಾನೆಗೆ ಕಳುಹಿಸಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ ಕಾರಣ ಕಾಲಾವಕಾಶ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**